ತಾರೀಖು ಡ್ಯೂ ಇತ್ತು ಮಾರ್ಚ್ 6ನೇ ತಾರೀಖು ತಾಲ್ಲೂಕು ಸೊಸೈಟಿಯ ಪ್ರೆಸಿಡೆಂಡ್ ಎಲೆಕ್ಷನ್ ಇತ್ತು. 5ನೇ ತಾರೀಖು ಸಾಯಂಕಾಲ 6 ಗಂಟೆಯಲ್ಲಿ ನೋಟೀಸ್ ಕೊಟ್ಟು ಕರೆಸಿ ಕೊಂಡು, ನೀನು ಡಿಫಾಲ್ಟರ್ ಎಲೆಕ್ಷನ್‌ಗೆ ನಿಲ್ಲುವ ಹಾಗಿಲ್ಲ ಎಂದು ಹೇಳುತ್ತಾರೆ, ಅದಕ್ಕೆ ಅವರು ನನಗೆ ಗೊತ್ತೇ ಇಲ್ಲ, ಕಾನೂನು ಪ್ರಕಾರ 3 ತಿಂಗಳು ಟೈಂ ಇದೆ. ಬೆಳಿಗ್ಗೆ ಕೊಡುತ್ತೇನೆ, ಟೈಂ ಕೊಡಿ ಎಂದು ಕೇಳಿದಾಗ ಕೇಸ್ ಆಡ್ಜರ್ನ್ ಮಾಡಿ ಪ್ರೊಸೀಡಿಂಗ್‌ಗೆ ರಜ ತೆಗೆದುಕೊಂಡಿದ್ದಾರೆ. ರಾತ್ರಿ 2 ಗಂಟೆಯಲ್ಲಿ ಬೇರೆ ಅಶೋತ್ತರಗಳಿಗೆ ಒಳಗಾಗಿ ಡಿಸ್‌ಕ್ವಾಲಿಫೈಡ್ ಎಂದು ಆರ್ಡರ್ ಕೊಡುತ್ತಾರೆ ಬೆಳಿಗ್ಗೆ ಭಾನುವಾರ. ಇಂತಹ ಅಧಿಕಾರಿಗಳು ಕಾನೂನಿಗೆ ವಿರೋಧವಾಗಿ ನಡೆದುಕೊಂಡಿರುವುದರಿಂದ ಇದರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ.

ಶ್ರೀ ಕೆ.ಎಚ್. ರಂಗನಾಥ್.—ಮಾನ್ಯ ನಡನ್ಮರು ಇದರ ಬಗ್ಗೆ ವಿವರವಾಗಿ ಬರೆದಿದ್ದರೆ ಇಷ್ಟು ಹೊತ್ತಿಗೆ ನಾನು ವಿಚಾರಿಸುತ್ತಿದ್ದೆ, ಕಾನೂನು ಪ್ರಕಾರ ಯಾವ ನಿಮಿಷಕ್ಕೆ ಓವರ್ ಡ್ಯೂ ಆಗುತ್ತದೋ ಆ ನಿಮಿಷದಿಂದ ಡಿಸ್‌ಕ್ವಾಲಿಫೈ ಆಗುತ್ತಾರೆ. ಹಣ ಕಟ್ಟದೆ ಹೋದರೆ ಡಿಸ್‌ಕ್ವಾಲಿಫೈ ಆಗುತ್ತಾರೆ. If he does not pay the amount on the due date according to the Section of the Act he becomes a defaulter.

ಶ್ರೀ ಕೆ.ಎಚ್. ಹನುಮೇಗೌಡ.—ಕಾನೂನು ಪ್ರಕಾರ 3 ತಿಂಗಳಿಗೆ ಕೊಡುವುದಕ್ಕೆ ಅವನಿಗೆ ಹಕ್ಕು ಇದೆ.

ಶ್ರೀ ಕೆ.ಎಚ್. ರಂಗನಾಥ್.— ಅವನಿಗೆ ಕೊಡುವುದಕ್ಕೆ 3 ತಿಂಗಳು ಅವಧಿ ಇದೆ. He becomes disqualified from the moment he becomes a defaulter.

ಶ್ರೀ ಕೆ ಎಚ್. ಹನುಮೇಗೌಡ — ನೋಟೀಸ್ ಕೊಡದೆ, ಏನೂ ಮಾಡದೇ ಬೆಳಿಗ್ಗೆ ಭಾನುವಾರ ಇರುವಾಗ ಸಾಯಂಕಾಲ 6 ಗಂಟೆಯಲ್ಲಿ.

ಅಧ್ಯಕ್ಷರು,— ಹೇಳಿದ್ದನ್ನೇ ಹೇಳುತ್ತಿರಲಿಲ್ಲ.

ಶ್ರೀ ಕೆ.ಎಚ್. ರಂಗನಾಥ್.—ಆ ಅಧಿಕಾರಿ ಏನು ಮಾಡಿದ್ದಾರೆ ಎಂದು ಬರೆಯಿರಿ.

ಯಾವತ್ತೂ ಹಣ ಡ್ಯೂ ಆಗಿರುತ್ತದೆಯೋ ಆ ತಾರೀಖು ಹಣ ಕಟ್ಟದೇ ಹೋದರೆ Under the Act he is disqualified from the moment he comes a defaulter.

SRI KAGODU THIMMAPPA.—He says that the officers are involved in this affair.

ಅಧ್ಯಕ್ಷರು.—ಅವರು ಏನು ಮಾಡಿದ್ದಾರೆ ಎನ್ನುವುದನ್ನು ಬರೆಯಿರಿ.

ಶ್ರೀ ಕೆ.ಎಚ್. ಹನುಮೇಗೌಡ.—ತಪ್ಪು ಇದ್ದರೆ ಕಾನೂನು ಪ್ರಕಾರ ಕ್ರಮ ತೆಗೆದು ಕೊಳ್ಳುತ್ತೀರಾ?

ಶ್ರೀ ಕೆ ಎಚ್. ರಂಗನಾಥ್ —ತಪ್ಪು ಮಾಡಿದ್ದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲೇ ಬೇಕಾಗುತ್ತದೆ. Let not the Hon'ble Member suspect about it. I don't keep quiet.

SRI KAGODU THIMMAPPA.—As the question No. 584 is very important I request the Chair to put the question.

MADAM SPEAKER.—Yes I put question No. 584

Expenditure incurred by Leather Industries Board

584. SRI PRABHAKAR (Varthur).—Will the Minister for Industries and Parliamentary Affairs be pleased to state:—

(*a*) the total amount or funds kept at the disposal of the Leather Industries Board;

(*b*) the amount spent by it on establishment, g ant of loans to the individuals, on equipment including furniture, on Insdu tries started by the Board itself up-to-date?

SRI K. H. RANGANATH (Minister for Corporation) on behalf of SRI S. M. KRISHNA][Minister for Industries and Parliamentary affairs)]

(*a*) The funds kept at the disposal of the Board are as indicated below:-

Year		Amount
1973-74	...	Rs. 10,000
1974-75	...	Rs. 6,66 000
1975-76	...	Rs, 8,00,000

(*b*) The Board has not given any loans to individuals, It has also not started any Industries as it is only an Advisory Board. Therefore, it has not incurred any expenditure in this regard. During 1974-75, the Board spent an amount of Rs. 66,633 for purchase of furniture for the office. Details of expenditure on establishment are given below;-

Year		Amount spent
1973-74	...	Rs. 8,230
1974-75	...	Rs. 60,717
1975-76	...	Rs, 1,23,000

ಶ್ರೀ ಕಾಗೋಡು ತಿಮ್ಮಪ್ಪ.—ಈ ಲೆದರ್ ಬೋರ್ಡ್‌ನಲ್ಲಿ 1973-74 ಮತ್ತು 1975-76 ರಲ್ಲಿ ಸಾಕಷ್ಟು ಹಣವನ್ನು ಇಟ್ಟಿದ್ದೀರಿ. ಇಷ್ಟು ಹಣ ಇದ್ದರೂ ಕೂಡ ಅದರ ಉದ್ದೇಶ ಸಾಧನೆ ಗೋಸ್ಕರ ಯಾವುದೇ ಕಾರ್ಯಕ್ರಮಗಳನ್ನು ಕೈಗೊಳ್ಳದೇ ಇರುವುದಕ್ಕೆ ಕಾರಣ ಏನು ಸ್ವಾಮಿ?

†ಶ್ರೀ ಕೆ. ಹೆಚ್. ರಂಗನಾಥ್.—1974—75ಕ್ಕೆ 6 ಲಕ್ಷ ಚಿಲ್ಲರೆ ರೂಪಾಯಿ ಇಟ್ಟಿದ್ದರು. ಆದರಲ್ಲಿ ಸಿಬ್ಬಂದಿ ವಗೈರೆ 1 ಲಕ್ಷ ಚಿಲ್ಲರೆ ರೂಪಾಯಿ ಕೊಡುವುದಕ್ಕೆ ತೀರ್ಮಾನವಾಗಿದೆ. ಮಿಕ್ಕ ಹಣವನ್ನು ರೀಅಪ್ರೊಪ್ರಿಯೇಷನ್ ಮಾಡಿ ಮೈಸೂರು ಬ್ಯಾಂಕ್‌ನಲ್ಲಿ ಇಡಲಾಗಿದೆ. 1975-76 ರಲ್ಲಿ 8 ಲಕ್ಷ ರೂಪಾಯಿ ಕೊಟ್ಟು ಮುಂದೆ ಕಾರ್ಪೊರೇಷನ್ ಮಾಡಬೇಕು ಎಂದು ನಕ್ಕರ ಅಭಿಪ್ರಾಯ ಪಟ್ಟಿದ್ದರಿಂದ ಅದಕ್ಕೋಸ್ಕರ ಎಲ್ಲಾ ಹಣವನ್ನು ಖರ್ಚುಮಾಡಬೇಕು ಎಂದು ಹೇಳಲಾಗಿದೆ.

ಶ್ರೀ ಕೆ.ಎಂ. ನಾಗಣ್ಣ.—ಇಂಡಸ್ಟ್ರಿ ಪ್ರಾರಂಭ ಮಾಡದೆ, ಒಂದು ಲಕ್ಷ ರೂಪಾಯಿ ಏತಕ್ಕೆ ಖರ್ಚಾಯಿತು?

ಶ್ರೀ ಕೆ.ಎಚ್. ರಂಗನಾಥ್.—ಇದು ಹೊಸದಾಗಿ ಆಫೀಸ್ ಪ್ರಾರಂಭ ಮಾಡಿದುದರಿಂದ ಸಿಬ್ಬಂದಿಗೋಸ್ಕರ ಖರ್ಚಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಿಬ್ಬಂದಿವರ್ಗ, ಫರ್ನಿಚರ್‌ಗೋಸ್ಕರ 1ಲಕ್ಷ ಚಿಲ್ಲರೆ ರೂಪಾಯಿ ಖರ್ಚುಮಾಡಿದ್ದೀರಿ. 1974—75ರಲ್ಲಿ 6 ಲಕ್ಷ 66 ಸಾವಿರ ರೂಪಾಯಿ ಕೈಯಲ್ಲಿತ್ತು. ಅದರಲ್ಲಿ ಕೆಲವು ಭಾಗವನ್ನಾದರೂ ಕೂಡ ಈ ವ್ಯಾಪ್ತಿಗೆ ಬರತಕ್ಕ ಜನರಿಗೆ ಸಹಾಯ ಮಾಡಿದ್ದರೆ

ಕೆಲವಾದರೂ ಕೈಗಾರಿಕೆಗಳನ್ನು ತರುವುದಕ್ಕೆ ಆಗುತ್ತಿತ್ತು. ಕಾರ್ಪೊರೇಷನ್ ಮಾಡಬೇಕು ಎನ್ನುವುದು ಇತ್ತೀಚಿನ ಮಾತು. ಪ್ರಾರಂಭದಲ್ಲಿ ಈ ಮಾತು ಇರಲಿಲ್ಲ, ಈ ಹಣವನ್ನು ಖರ್ಚು ಮಾಡದೇ ಇರುವುದಕ್ಕೆ ಕಾರಣವೇನು ಸ್ವಾಮಿ?

ಶ್ರೀ ಕೆ.ಎಚ್. ರಂಗನಾಥ್.—ಆಡ್ವೈಸರಿ ಬೋರ್ಡ್‌ನವರು ಕೆಲವು ಸ್ಕೀಂಗಳನ್ನು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ. ತದನಂತರ ಮದ್ರಾಸ್‌ನಲ್ಲಿರತಕ್ಕ ಸೆಂಟ್ರಲ್ ಲೆದರ್ ರೀಸರ್ಚ್ ಇನ್‌ಸ್ಟಿಟ್ಯೂಷನ್ ಇದ್ದಹಾಗೆ ಕರ್ನಾಟಕದಲ್ಲಿ ಮಾಡಬೇಕು ಎನ್ನುವ ವಿಚಾರದ ಬಗ್ಗೆ Techno Economic Survey of the Leather based Industries in Karnataka ಮಾಡಿ ಅವರು ಕೊಟ್ಟಿಂಥ ವರದಿ ಮೇಲೆ ಕಾರ್ಪೊರೇಷನ್ ಮಾಡಬೇಕು ಎಂದು ತಿಳಿಸಿದರು. ಆದುದರಿಂದ ಸರ್ಕಾರ ಕಾರ್ಪೊರೇಷನ್ ಮಾಡಬೇಕು ಎಂದು ಅಭಿಪ್ರಾಯ ಇಟ್ಟುಕೊಂಡಿರುವುದರಿಂದ ಆ ಹಣವನ್ನು ಬೇರೆ ಕೆಲಸಗಳಿಗೆ ಖರ್ಚುಮಾಡಬಾರದು ಎಂದು ಅದೇಶ ಕೊಟ್ಟು ಹಾಗೇ ಉಳಿಸಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಮಂಡಲಿಯನ್ನು ಸ್ಥಾಪನೆ ಮಾಡತಕ್ಕ ಕಾಲದಲ್ಲಿ ಸರ್ಕಾರಕ್ಕೆ ಇವರು ನಿರ್ದಿಷ್ಟವಾಗಿ ಇಂತ ಕೆಲಸ ಮಾಡಬೇಕು ಎನ್ನುವುದು ಗೊತ್ತು. ಈ ಮಂಡಲಿಯವರು ಸ್ಕೀ ಅನ್ನು ವರ್ಕ್ ಔಟ್ ಮಾಡಿ ವರದಿಯನ್ನೇನಾದರೂ ಕೊಟ್ಟಿದ್ದಾರೆಯೇ? ಎಷ್ಟು ದಿವಸದ ಮೇಲೆ ರೀಸರ್ಚ್ ಇನ್‌ಸ್ಟಿಟ್ಯೂಟ್‌ನಿಂದ ಇದನ್ನು ಕಾರ್ಪೊರೇಷನ್ ಮಾಡಬೇಕು ಎನ್ನುವ ಸಲಹೆ ಬಂತು.

ಶ್ರೀ ಕೆ.ಎಚ್. ರಂಗನಾಥ್.—ಇದಕ್ಕೆ ಸಿಬ್ಬಂದಿ ವರ್ಗವನ್ನು 1973ರ ಜೂನ್‌ನಲ್ಲಿ ಮಂಜೂರು ಮಾಡಿದ್ದು ತದನಂತರ ಇದು ಕೆಲಸ ಮಾಡಲಿಕ್ಕೆ ಪ್ರಾರಂಭವಾಗಿ 1974-75 ರಲ್ಲಿ ಇದರ ಕೆಲಸ ಕಾರ್ಯಗಳಿಗೋಸ್ಕರ 6.50 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದೇವೆ. ಅಲ್ಲದೆ ಇದರಲ್ಲಿ ಒಂದು ಅಡ್ವೈಸರಿ ಬೋರ್ಡ್ ಎಂದು ಮಾಡಿದ್ದೇವೆ. ಇವರು ಇದರ ಕೆಲಸ ಕಾರ್ಯಗಳ ಬಗ್ಗೆ ಸ್ಕೀಂಗಳನ್ನು ಸರ್ಕಾರಕ್ಕೆ ಕೊಡುತ್ತಾರೆ.

SRI KAGODU THIMMAPPA.—On What date the Board has submitted a proposal to the Government and what time the Government has taken to scrutinise it?

SRI K. H. RANGANATH.—I want notice

ಶ್ರೀ ಕಾಗೋಡು ತಿಮ್ಮಪ್ಪ.—1974-75ರಲ್ಲಿ 6,60 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದೀರಿ. ಯಾವ ಸ್ಕೀಂಗಳು ಸರ್ಕಾರಕ್ಕೆ ಬರವೆ ಇದ್ದರೂ 6,60 ಲಕ್ಷ ರೂಪಾಯಿಗಳನ್ನು ಇದಕ್ಕೆ ಕೊಟ್ಟಿರತಕ್ಕ ಉದ್ದೇಶ ಏನು?

ಶ್ರೀ ಕೆ.ಎಚ್. ರಂಗನಾಥ್.—1974-75 ರಲ್ಲಿ ಬಡ್ಜೆಟ್ಟಿನಲ್ಲಿ 6.60 ಲಕ್ಷ ರೂಪಾಯಿಗಳನ್ನು ಇಡಲಾಗಿದೆ, 75-76 ರಲ್ಲಿ 8 ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಇದನ್ನು ಖರ್ಚು ಮಾಡುವುದಕ್ಕೆ ಕೊಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಭಾವಿಸಬಾರದು. The amount provided in the budget in 1974-75 was Rs. 6 lakhs and odd and that provided in 1975-76 is Rs. 8 lakhs. Out of Rs. 6,66,000, a lakh and odd has been spent for equipment and establishment.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿದಂಥ ಹಣವನ್ನು ಇವರು ಡ್ರಾ ಮಾಡಿ ಬ್ಯಾಂಕಿನಲ್ಲಿಟ್ಟಿದ್ದಾರೆಂದು ತಿಳಿಸಿದ್ದೀರಿ. ಇಷ್ಟು ಹಣವನ್ನು ಇವರು ಭ್ಯಾಂಕಿನಲ್ಲಿಟ್ಟಿರ ಬೇಕಾದಂಥ ಅಗತ್ಯ ಇತ್ತು ? ಇದನ್ನು ಬ್ಯಾಂಕ್‌ನಲ್ಲಿ ಕ್ರೆಡಿಟ್ ಮಾಡಿದ ಮೇಲೆ ಏಕೆ ಖರ್ಚು ಮಾಡಲಿಲ್ಲ ?

ಶ್ರೀ ಕೆ.ಎಚ್. ರಂಗನಾಥ.—ಇದರ ಕೆಲಸ ಕಾರ್ಯಗಳಿಗೋಸ್ಕರ ಸರ್ಕಾರದವರು ಬಡ್ಜೆಟ್ಟಿನಲ್ಲಿ ಹಣವನ್ನು ಪ್ರೊವೈಡ್ ಮಾಡಿದ್ದು ಬೋರ್ಡಿನಿಂದ ಏನೂ ಸ್ಕೀಂಗಳು ಬಾರದೆ ಇದ್ದುದರಿಂದ ತದನ್ನು ಖರ್ಚು ಮಾಡಿಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಲೆದರ್ ಬೋರ್ಡ್ ಕೆಲಸ ಮಾಡತಕ್ಕೆದ್ದನ್ನು ನೋಡಿದರೆ ನನಗನ್ನಿಸುತ್ತದೆ, ಸಮಾಜ ಕಲ್ಯಾಣ ಇಲಾಖೆಯವರು ಡೈರೆಕ್ಟರ್ ಅವರಿಂದ ಪ್ರಪೋಸಲ್ಸ್ ಬಂದರೂ ಮಂಜೂರಾತಿಯನ್ನು ಒಂದು ವರ್ಷವಾದರೂ ಕೊಡದೆ ಇದ್ದಂಥ ಪ್ರಕರಣ ನಮ್ಮ ಮುಂದೆ ಬಂದಿದ್ದು ನಮಗೆ ಗೊತ್ತಿದೆ. ಅದೇ ರೀತಿ ಈ ಬೋರ್ಡಿನಿಂದ ಪ್ರಪೋಸಲ್ಸ್ ಪಗೈರೆ ಇಲ್ಲಿಗೆ ಬಂದರೆ, ಪರ್ಮಾನುಗಟ್ಟಲೆ ಇಟ್ಟುಕೊಳ್ಳುವುದಾದರೆ, ಈ ಬೋರ್ಡನ್ನು ಏಕೆ ರಚನೆ ಮಾಡಬೇಕು ? ಈ ಬಗ್ಗೆ ಸರ್ಕಾರದವರು ಏನು ಆಲೋಚನೆ ಮಾಡಿದ್ದಾರೆ ಎನ್ನುವುದನ್ನು ಹೇಳಬೇಕು.

ಶ್ರೀ ಕೆ.ಎಚ್. ರಂಗನಾಥ್.—ಸೆಂಟ್ರಲ್ ಲೆದರ್ ರೀಸರ್ಚ್ ಇನ್ಸ್‌ಟಿಟ್ಯೂಟ್ ಮದ್ರಾಸ್ ಇವರನ್ನು ಇದರ ಬಗ್ಗೆ ಟೆಕ್ನೋ ಎಕನಾಮೀಕ್ ಸರ್ವೆ ಮಾಡಿ ಸಲಹೆ ಕೊಡಿ ಎಂದು ಕೇಳಿದ್ದೇವೆ ಇಂಥವುಗಳನ್ನು ಅಭಿವೃದ್ಧಿಪಡಿಸಬೇಕು ಎನ್ನುವುದು ಸರ್ಕಾರದ ಉದ್ದೇಶ. ನಮ್ಮಲ್ಲಿ ಕೋ-ಆಪ್ಟಿನಿಂಗ್ ಬೋರ್ಡ್ ಇದೆ. ಇದು ಒಂದು ಅಡ್‌ಹಾಕ್ ರೀತಿಯಲ್ಲಿ ನಡೆಯುತ್ತಿದೆ. ಸರಿಯಾದ ವ್ಯವಸ್ಥಿತವಾದ ರೀತಿಯಲ್ಲಿ ಇದು ಕೆಲಸ ಮಾಡುತ್ತಿಲ್ಲ. ಇದು ಸರಿಯಾದ ವ್ಯವಸ್ಥೆಯಲ್ಲಿ ನಡೆಯಬೇಕು ಎನ್ನುವುದು ನಮ್ಮ ಉದ್ದೇಶ. ಆದ್ದರಿಂದಲೇ ನಾವು ಮದ್ರಾಸ್ ಲೆದರ್ ರೀಸರ್ಚ್ ಇನ್ಸ್‌ಟಿಟೂಟ್‌ನವರಿಗೆ ಇದರ ಬಗ್ಗೆ ಸಲಹೆ ಕೊಡಿ ಎಂದು ಕೇಳಿದ್ದೇವೆ. ಇದು ಒಂದಮೇಲೆ ಬೋರ್ಡನ್ನು ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಮಾಡಬೇಕು ಎಂದು ಇದ್ದೇವೆ. ತದನಂತರ ಇದನ್ನು ಕಾರ್ಪೋರೇಷನ್ ಮಾಡಿ, ಇಲ್ಲಿಯೇ ಒಂದು ಕಾಮೇಟೀರಿಯಲ್ಸ್ ಬ್ಯಾಂಕ್ ಒಂದನ್ನು ಮಾಡಿ ಎಂದು ಒಂದು ಅಭಿಪ್ರಾಯ ಬಂದಿರುವುದರಿಂದ ಸರ್ಕಾರದವರು ಇದನ್ನು ಕಾರ್ಪೋರೇಷನ್ ಆಗಿ ಮಾಡಬೇಕು ಎನ್ನುವ ಉದ್ದೇಶವನ್ನು ಇಟ್ಟು ಕೊಂಡಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಸರ್ಕಾರದವರಿಂದ ಕಣ್ಣನ್ನು ಒರೆಸುವುದಕ್ಕೆ ಕೆಲಸ ಮಾಡುತ್ತಿದ್ದಾರೆಂದು ತಿಳಿಯಬಾರದು.

ಶ್ರೀ ಕಾಗೋಡು ತಿಮ್ಮಪ್ಪ.—ಚರ್ಮದ ಕೆಲಸ ಮಾಡುವುದಕ್ಕೆ ರೀಸರ್ಚ್ ಇನ್ಸ್‌ಟಿಟ್ಯೂಟ್‌ಗೆ ಹೋಗಬೇಕು ಎಂದರೆ ಏನು ಅರ್ಥ ?

ಶ್ರೀ ಕೆ.ಎಚ್. ರಂಗನಾಥ್.—ನಮ್ಮ ದೇಶದಲ್ಲಿ ಚರ್ಮದ ಕೆಲಸದಲ್ಲಿ ತೊಡಗಿರತಕ್ಕ ಜನ ಸುಮಾರು ೫೦ ಸಾವಿರ ಇದ್ದಾರೆ. ಇದನ್ನು ನಾವು ಸರಿಯಾದ ವ್ಯವಸ್ಥೆಯಲ್ಲಿ ನಡೆಸಬೇಕಾಗಿದೆ. ಇದಕ್ಕೆ ಮದ್ರಾಸ್ ರೀಸರ್ಚ್ ಇನ್ಸ್‌ಟಿಟ್ಯೂಟ್‌ನವರು, ತಜ್ಞರು ಇರುವುದರಿಂದ ಅವರ ಸಲಹೆಯನ್ನು ಕೇಳಿ ಅವರ ಒಂದು ಅಭಿಪ್ರಾಯವನ್ನು ತೆಗೆದುಕೊಂಡಿದ್ದೇವೆ. ಈ ಬೋರ್ಡಿನವರು ಚೆನ್ನಾಗಿ ಕೆಲಸ ಮಾಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡಿರುವುದರಿಂದ ಹಣವನ್ನು ಡ್ರಾ ಮಾಡಿ ಮೈಸೂರು ಬ್ಯಾಂಕಿನಲ್ಲಿಟ್ಟು ಕೊಂಡಿದ್ದಾರೆ. ಮತ್ತು ಈ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಬೇಕು ಎಂದು ವಿಚಾರ ಮಾಡಿದ್ದಾರೆ. ಇವರನ್ನು ಸುಮ್ಮನೆ ಕೂಡಿಸಬೇಕು ಎನ್ನುವುದೂ ಸರ್ಕಾರದ ಅಭಿಪ್ರಾಯವಲ್ಲ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

QUESTIONS FOR ANSWERS ON THE DAY
(but not taken up)

Misbehaviour of the Process Server of J.M.F.C., Indi

37. SRI J.L. KABADE. (Balloli).—Will the Minister for Law and Municipal Administration be pleased to state.—

(*a*) whether it is a fact that the Process Server of J.M F.C., Indi, had misbehaved with the clerical staff, and that concerned officials have submitted a report to the Presiding Officer on 25th July 1975 in that behalf ;

(*b*) if so, the action taken by the authority in the matter ;

(*c*) whether it is a fact that the Process Server had abused them taking the name of their cast :